ನಿಲುವಳಿ ಸೂಚನೆ.

ದಿನಾಂಕ 12.2.1994ರಲ್ಲಿ ಧಾರವಾಡಜಿಲ್ಲೆ ಹಿರೇಕೆರೂರಿನಲ್ಲಿ ವಾಲ್ಮೀಕಿ ಸಮ್ಮೇಳನದಲ್ಲಿ ಮುಖ್ಯಮಂತ್ರಿಗಳು ಭಾಗವಹಿಸಲು ಹೆಲಿಕ್ಯಾಪ್ಟರ್‌ನಲ್ಲಿ ಬಂದಾಗ, ಅದನ್ನು ನೋಡಲು ಕಟ್ಟಡದ ಮೇಲೆ ಮಕ್ಕಳು ಹತ್ತಿದ ಸಮಯದಲ್ಲಿ ಆಗಿರುವ ದುರಂತ.

+ ಶ್ರೀ ಬಿ.ಎಚ್. ಬನ್ನಿಕೋಡ್ (ಹಿರೇಕೆರೂರು) : ಮಾನ್ಯ ಅಧ್ಯಕ್ಷರೇ ಈ ದಿವಸ ನಾನು ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೇನೆ. ಈ ಒಂದು ವಿಚಾರವನ್ನು ಪ್ರಸ್ತಾಪ ಮಾಡಲಿಕ್ಕೆ ನನಗೆ ಬಹಳ ದುಃಖವಾಗುತ್ತದೆ. ಈ ಸದನದಲ್ಲಿ ಮೊನ್ನೆ ತಾನೇ 12-2-94ರ ಶನಿವಾರದ ದಿವಸ ಮಾನ್ಯ ಮುಖ್ಯಮಂತ್ರಿಗಳು ಧಾರವಾಡ ಜಿಲ್ಲೆಯ ನನ್ನ ಕ್ಷೇತ್ರವಾದ ಹಿರೇಕೆರೂರಿಗೆ ಬಂದು ರಾಜ್ಯ ಮಟ್ಟದ ವಾಲ್ಮೀಕಿ ಸಮ್ಮೇಳನದಲ್ಲಿ ಭಾಗವಹಿಸಿ ಮರು ಪ್ರಯಾಣ ಮಾಡುತ್ತಿದ್ದ ಸಮಯದಲ್ಲಿ ಮಕ್ಕಳು ಹೆಲಿಕಾಪ್ಟರ್ ನೋಡಲಿಕ್ಕೆ ಒಂದು ಕಟ್ಟಡದ ಮೇಲೆ ಹತ್ತಿದಾಗ ಅಲ್ಲಿ ಕಟ್ಟಡ ಕುಸಿದು ಅಲ್ಲಿಂದ ಬಿದ್ದು ಆ ಸ್ಥಳದಲ್ಲೇ 9 ವರ್ಷದ ಬಾಲಕಿ ಮೃತಪಟ್ಟಿದ್ದಾಳೆ. ಮತ್ತೆ ಸುಮಾರು 40 ಶಾಲಾ ಮಕ್ಕಳು ಸುಮಾರು 8 ರಿಂದ 15 ವರ್ಷದ ಮಕ್ಕಳು, ಆ ಹೆಲಿಕಾಪ್ಟರ್ ಮೇಲೆ ಹಾರುವುದು ಹೇಗೆ ಎಂದು ನೋಡಲು ಹೋಗಿದ್ದರು. ಅದು ಕೋರ್ಟ ಬಿಲ್ಡಿಂಗ್; ಅದಕ್ಕೆ ತಾರಸಿ ಹಾಕಿ ಮುಗಿಸಿದ್ದಾರೆ. ಅದು ಇನ್ನೂ ಪ್ಲಾಸ್ಟರ್ ಆಗಿಲ್ಲ. ಅದು 4 ಇಂಚಿನ ಕುಂಬಿ ಮೇಲೆ ಕಟ್ಟಿದ್ದುಥದ್ದು , ನೂಕಿಸಿದ ಕೂಡಲೇ ಹುಡುಗರು ಎಲ್ಲಾ ಮೇಲಿಂದ ಬಿದ್ದು ಕೈಕಾಲು ಮುರಿದಿದೆ; ತಲೆ ಹೊಡೆದಿದೆ; ಕಣ್ಣು ಹೋಗಿವೆ; ಹೀಗಾಗಿ ಇದೊಂದು ಚಿಂತಾಜನಕ ಪರಿಸ್ಥಿತಿ ಆಗಿದೆ. ಈ ಬಗ್ಗೆ ವಿಶೇಷ ಗಮನ ಹರಿಸಿ ಮುಖ್ಯಮಂತ್ರಿಗಳೂ ಸಹ ಆ ಕೂಡಲೇ ಬಂದು ಅಲ್ಲಿ ನಡೆದಂತಹ ದೃಶ್ಯವನ್ನು ಕಣ್ಣಿನಿಂದ ನೋಡಿದರು. ಆ ನಂತರ ಅಲ್ಲಿದ್ದಂತಹ ಎಲ್ಲಾ ಡಿ ಸಿ ಯವರು ಎಸ್ಪಿ ಯವರು ಎಲ್ಲಾ ಇಲಾಖಾಧಿಕಾರಿಗಳು ಕೂಡಲೇ ತಕ್ಷಣ ಸಮಯ ಪ್ರಜ್ಞೆಯನ್ನು ಇಟ್ಟುಕೊಂಡು ಆಸ್ಪತ್ರೆಗೆ ಎಲ್ಲಾ ಮಕ್ಕಳನ್ನು ಸಾಗಿಸಿದೆವು. ನಾವು ಆ ಜಾಗದಲ್ಲಿ ಇದ್ದೆವು. ಆ ನಂತರ ತೀವ್ರ ಸ್ವರೂಪದ ಗಾಯಗಳಾದವರನ್ನು ಸರ್ಕಾರಿ ವಾಹನಗಳಲ್ಲಿ ದಾವಣಗೆರೆ ಸರ್ಕಾರಿ ಆಸ್ಪತ್ರೆಗೆ ಸಾಗಿಸಲಾಯಿತು. ಆ ಸ್ಪಾಟ್‌ನಲ್ಲೇ 9 ವರ್ಷದ ರಶ್ಮಿ ಎನ್ನತಕ್ಕಂಥ ಒಬ್ಬ ಮುಸ್ಲಿಂ ಮಗು ಸತ್ತುಹೋಯಿತು. ನಿನ್ನೆಯ ದಿವಸ ದಾವಣಗೆರೆಯಲ್ಲಿ ಆಗದೆ 4 ಜನರನ್ನು ಬೆಂಗಳೂರು ಆಸ್ಪತ್ರೆಗೆ ಕಳುಹಿಸಿದರು. ಅದರಲ್ಲಿ ಒಂದು ಮಗು ರುದ್ರಪ್ಪ ಶಾಂತನಗೌಡ ಎನ್ನುವ ಚಿಕ್ಕಕೆರೂರಿನ ಒಬ್ಬ ಹುಡುಗ ಇಲ್ಲಿ ಬೆಂಗಳೂರಿನ ಆಸ್ಪತ್ರೆಯಲ್ಲಿ ಸುಮಾರು ಮಧ್ಯಾಹ್ನ 1-30ಕ್ಕೆ ತೀರಿಕೊಂಡ; ಇನ್ನು 2-3 ಜನ ಬಹಳ ಚಿಂತಾಜನಕ ಪರಿಸ್ಥಿತಿಯಲ್ಲಿದ್ದಾರೆ. ಇದಕ್ಕೆ ಯಾರೂ ಹೊಣೆ ಇಲ್ಲ. ಆದರೆ ಮಕ್ಕಳು ತಮ್ಮ ಒಂದು ಆತುರತೆಯಿಂದ ನೋಡಬೇಕು ಎಂದು ಹೇಳಿ ಅಲ್ಲಿಗೆ ಹೋದರೆ ಅದು ಒಂದು ಸಣ್ಣ ಕಂಬಿ ಅದು ಕಟ್ಟಡದ ಮೇಲೆ ಕಟ್ಟಿತಕ್ಕಂಥ 4 ಇಂಚಿನ ಹಸಿಯಾಗಿದ್ದಂಥ ಒಂದು ಕುಂಬಿ ಗೋಡೆ ಅದು ಇನ್ನೂ ಪ್ಲಾಸ್ಟರ್ ಆಗಿರಲಿಲ್ಲ. ಅಪೂರ್ಣ ಆಗಿತ್ತು. ಅದರ ಮೇಲೆ ಹತ್ತಿದ್ದರು. ಹಿಂದಿನಿಂದ ಹುಡುಗರು ನೂಕಿದ ಕೂಡಲೇ 40-50ಜನ ಹುಡುಗರು ಕುರಿ ಬಿದ್ದಂತೆ ಬಿದ್ದರು; ನಮ್ಮ ಮುಖ್ಯಮಂತ್ರಿಗಳು ನೋಡಿದರು. ನಾನೂ ನೋಡಿದೆ;

ಆ ದೃಶ್ಯವನ್ನು ನೋಡಿ ಎಲ್ಲಾ ಮಕ್ಕಳು ಸತ್ತು ಹೋದರೇನೋ ಎನ್ನುವಷ್ಟರ ಮಟ್ಟಿಗೆ ನಮಗೆ ಭೀಕರ ಅನಿಸಿತು. ಆದರೆ ದೈವದಿಂದ ಏನೋ ಆಗಿದೆ ಎಂದು ತಿಳಿದುಕೊಂಡಿದ್ದೆವು ಅಷ್ಟು ಅನಾಹುತ ಆಗಿಲ್ಲ. ಆದರೂ ಸಹ ಶಾಶ್ವತವಾಗಿ ಅನೇಕ

ಮಕ್ಕಳು ಇವತ್ತು ಕೈಕಾಲು ಮುರಿದುಕೊಂಡು ಕಣ್ಣು ಹೋಗಿ ಅಂಗವಿಕಲರು ಆಗಬಹುದೋ ಏನೋ ಎನ್ನುವ ಭೀತಿ ನಮಗೆ ಇದೆ. ಇದರಲ್ಲಿ ತೀರಿಕೊಂಡಿರತಕ್ಕಂಥವರಿಗೆ ಕನಿಷ್ಟ ಮಾನವೀಯತೆಯನ್ನು ಇಟ್ಟುಕೊಂಡು ಸರ್ಕಾರ ಈಗಾಗಲೇ ಬೇರೆ ಬೇರೆ ವಿಚಾರದಲ್ಲಿ ಒಂದು ಲಕ್ಷ ರೂಪಾಯಿಗಳನ್ನು ತೀರಿಕೊಂಡಂತಹ ಮಕ್ಕಳ ಕುಟುಂಬಕ್ಕೆ ಅಮೇಲೆ ಶಾಶ್ವತವಾದಂತಹ ಅಂಗವಿಕಲರಾದ ಮಕ್ಕಳಿಗೆ ಕೈ ಹೋಗಿದ್ದರೆ ಕಾಲು ಹೋಗಿದ್ದರೆ ಕಣ್ಣು ಹೋಗಿದ್ದರೆ ಅಂತಹವರಿಗೆ ಸರ್ಕಾರ ಕನಿಷ್ಟ 50 ಸಾವಿರ ರೂಪಾಯಿಗಳನ್ನು ಕೊಡಬೇಕು ಮತ್ತು ಅವರಿಗೆ ಮುಂದೆ ಏನೂ ಮಾಡಲಿಕ್ಕೆ ಸಾಧ್ಯವಿಲ್ಲ ಅಂದರೆ ಪ್ರತಿ ತಿಂಗಳು ಏನಾದರೂ ಅವರಿಗೆ ಧನಸಹಾಯವನ್ನು ಮಾಡುವ ವಿಚಾರ ಅಥವಾ ಸರ್ಕಾರಿ ನೌಕರಿಯಲ್ಲಿ ಅವರು ಏನಾದರೂ ಕೆಲಸ ಮಾಡಲಿಕ್ಕೆ ಸಾಧ್ಯವಿದ್ದರೆ ಅದನ್ನು ನೀಡುವಂಥದ್ದು ಹೀಗೆ ಎಲ್ಲಾ ವಿಧವಾದ ಸಹಾಯ ಮಾಡಬೇಕು ಎಂದು ಅವರಿಗೆ ಸ್ಥಳದಲ್ಲೇ ಹೇಳಿದೆ. ಮಾನ್ಯ ಮುಖ್ಯಮಂತ್ರಿಗಳೂ ಸಹ ಈ ಒಂದು ಕರುಣಾಜನಕ ಸ್ಥಿತಿಯನ್ನು ನೋಡಿ ಅವರೂ ಸಹ ಈ ಬಗ್ಗೆ ಚಿಂತನೆಯನ್ನು ಮಾಡೋಣ; ಸಾಧ್ಯವಾದ ಎಲ್ಲಾ ಪ್ರಯತ್ನಗಳನ್ನು ಮಾಡಿ ಸರ್ಕಾರದಿಂದ ಧನಸಹಾಯ ಕೊಡೋಣ ಎಂದು ಹೇಳಿದ್ದಾರೆ. ಇದರ ಬಗ್ಗೆ ಮುಖ್ಯಮಂತ್ರಿಗಳು ಹೇಳಿಕೆಯನ್ನು ಮಾಡಬೇಕು. ಈ ಕೂಡಲೇ ಅವರಿಗೆ ಪರಿಹಾರ ಸಿಗುವ ಹಾಗೆ ಮಾಡಬೇಕು ಎಂದು ಹೇಳಿ ತಮ್ಮ ಮೂಲಕ ಸರ್ಕಾರವನ್ನು ಮುಖ್ಯಮಂತ್ರಿಗಳನ್ನು ಕೇಳಬಯಸುತ್ತೇನೆ. ವಿವರಗಳನ್ನು ನಿಶ್ಚಿತವಾಗಿ ಯಾವ ಗ್ರಾಮದವರು ಯಾರ ಹುಡುಗರು ಏನೇನು ಆಗಿದೆ ಏನು ಅಲ್ಲಿ ನಡೆದಂಥದ್ದು, ಎಲ್ಲಿದ್ದಾರೆ ಅವರು, ಬೆಂಗಳೂರು ಆಸ್ಪತ್ರೆಯಲ್ಲಿ ಎಷ್ಟು ಜನ ಇದ್ದಾರೆ, ದಾವಣಗೆರೆ ಆಸ್ಪತ್ರೆಯಲ್ಲಿ ಎಷ್ಟು ಜನ ಇದ್ದಾರೆ, ಮತ್ತೆ ಸಣ್ಣ ಪುಟ್ಟ ಗಾಯಗಳಾಗಿದ್ದು ತಮ್ಮ ತಮ್ಮ ಮನೆಗಳಿಗೆ ಎಷ್ಟು ಜನ ಹೋಗಿದ್ದಾರೆ ಇವರ ಬಗ್ಗೆ ಸರ್ಕಾರ ಈ ಕೂಡಲೇ ಒಂದು ಹೇಳಿಕೆಯನ್ನು ಕೊಟ್ಟು ಸಾಧ್ಯವಿದ್ದ ಎಲ್ಲಾ ರೀತಿಯ ಸಹಾಯವನ್ನು ಮಾನವೀಯ ದೃಷ್ಟಿಯಿಂದ ಮಾಡಬೇಕು ಎಂದು ತಮ್ಮ ಮೂಲಕ ಸರ್ಕಾರವನ್ನು ಮುಖ್ಯಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಹಾರನಹಳ್ಳಿ ರಾಮಸ್ವಾಮಿ: ಮಾನ್ಯ ಅಧ್ಯಕ್ಷರೇ, ಈ ವಿಷಯದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಬಂದು ಹೇಳಿಕೆಯನ್ನು ಕೊಡುತ್ತಾರೆ.

ಹಕ್ಕುಚ್ಯುತಿ ನಿರ್ಣಯ

ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ರಾಜ್ಯ ಸಚಿವರ ಮೇಲೆ

+ ಶ್ರೀ ಎಸ್.ಎಚ್. ಕೌಜಲಗಿ: ಮಾನ್ಯ ಅಧ್ಯಕ್ಷರೇ, ನಾನು ಇವತ್ತಿನ ದಿವಸ ನಿಯಮ 190, 191 ಹಾಗೂ 195ರ ನಿಯಮಗಳ ಪ್ರಕಾರ ಮಾನ್ಯ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ರಾಜ್ಯ ಸಚಿವರ ಮೇಲೆ ಇವತ್ತಿನ ದಿವಸ ಒಂದು ಕ್ರಮ ತೆಗೆದುಕೊಳ್ಳಬೇಕು ಎನ್ನುವ ಬಗ್ಗೆ ನಾನು ಒಂದು ಹಕ್ಕುಚುತಿ ಕಳುಹಿಸಿಕೊಟ್ಟಿದ್ದೇನೆ. ಮುಖ್ಯವಾಗಿ ನಾನು ಈ ವಿಶ್ವ ಆಹಾರ ಯೋಜನೆ ಅಡಿಯಲ್ಲಿ ಎರಡು ಕೆಲಸಗಳನ್ನು ತೆಗೆದುಕೊಳ್ಳಬೇಕೆಂದು ನಿಯಮ 72ರ ಪ್ರಕಾರ ಅರ್ಜಿ ಸಲ್ಲಿಸಿದ್ದೆ. ಆ ಕಾಲಕ್ಕೆ ಅವರು ನನಗೆ ಲಿಖಿತವಾಗಿ ವಿಶ್ವ ಆಹಾರ ಯೋಜನೆಯ 93-94 ರ ಸಾಲಿನ ಕೆಲಸಗಳ ಕಾರ್ಯಕ್ರಮ ಈಗಾಗಲೇ ಅಂತಿಮಗೊಳಿಸಿ ಅನುಮೋದನೆ ನೀಡಲಾಗಿರುವ ಕಾರಣ ಮೇಲಿನ ಕೆಲಸಗಳನ್ನು 1994-95ನೇ ಸಾಲಿನ ವಿಶ್ವ ಆಹಾರಯೋಜನೆ ಅಡಿಯಲ್ಲಿ ಕಾರ್ಯಕ್ರಮದಲ್ಲಿ ಸೇರಿಸಲು ಪರಿಶೀಲಿಸಲಾಗುವುದೆಂದು ಉತ್ತರ ಕೊಟ್ಟಿದ್ದಾರೆ. ಆ ಉತ್ತರಕ್ಕೆ ಮೊನ್ನೆ ದಿವಸ ಮಾನ್ಯ ಓಂ ಪ್ರಕಾಶ್ ಕಣಗಲಿಯವರು ನಮ್ಮ ಜಿಲ್ಲಾ ಪರಿಷತ್ತಿನ ಸಮಕ್ಷಮ ಮೀಟಿಂಗ್ನಲ್ಲಿ 93-94ನೇ ಸಾಲಿನ ಯಾವುದೇ ಕಾರ್ಯಕ್ರಮಗಳ ಬಗ್ಗೆ ಯಾವುದೇ ಮೀಟಿಂಗ್ ಆಗಿರುವುದಿಲ್ಲ ಈ ಮಾರ್ಚ್ ಒಳಗಾಗಿ